ಬೆಂಗಳೂರಿನ ಅಭಿವೃದ್ಧಿ ಪ್ರಾಧಿಕಾರದಲ್ಲಿ ಎನ್. ಆರ್. ಐ. ಹೌಸಿಂಗ್ ಅಸೋಷಿಯೇಷನ್ ಬಗ್ಗೆ.

೭೦. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮತಿಯಿಂದ ಎನ್. ಆರ್. ಐ. ಹೌಸಿಂಗ್ ಸೊಸೈಟಿಗೆ ಬೆಂಗಳೂರಿನಲ್ಲಿ ಕೊಟ್ಟಿರುವ ಜಮೀನಿನ ವಿಸ್ತೀರ್ಣವೆಷ್ಟು ;

ಆ) ಅದು ನೊಂದಾಯಿತ ಸಂಘವಾಗಿದೆಯೇ ;

ಇ) ಹಾಗಿದ್ದಲ್ಲಿ ನಿರ್ದೇಶಕರ ಮತ್ತು ಕಛೇರಿ ಪದಾಧಿಕಾರಿಗಳ ಹೆಸರುಗಳೇನು ;

ಈ) ಜಮೀನನ್ನು ಮಂಜೂರು ಮಾಡಲು ಸಂಘದವರಿಂದ ಭಾರತೀಯ ಅಥವಾ ವಿದೇಶಿಯ ಹಣವನ್ನು ಸಂಘದ ಮತಿಯಿಂದ ಕೇಪಣಿಯಾಗಿ ಪಡೆಯಲಾಗಿದೆಯೇ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಸಚಿವರು).—

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಎನ್. ಆರ್. ಐ. ಹೌಸಿಂಗ್ ಸೊಸೈಟಿಗೆ ಭೂಮಿಯನ್ನು ಮಂಜೂರು ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವಿತರಿಸಿರುವ ನಿವೇಶನಗಳನ್ನು ರದ್ದು ಪಡಿಸಿರುವ ಬಗ್ಗೆ.

೧೯೮. ಶ್ರೀಮತಿ ಮುಕ್ತಾರುನ್ನೀಸ ಬೇಗಂ (ನರಸಿಂಹ ರಾಜಪುರ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

೧) ನಿವೇಶನದ ಬಾಬ್ತು ಭಾಗಶಃ ಕಟ್ಟಿರುವ ೫೦೯ ನಿವೇಶನಗಳನ್ನು ಮೈಸೂರು ಪ್ರಾಧಿಕಾರದವರು ರದ್ದುಗೊಳಿಸಿರುವುದು ನಿಜವೇ, ಹಾಗಿದ್ದರೆ ಯಾವ ನಿಯಮಗಳಂತೆ ಮಾಡಿದೆ,

೨) ಪ್ರಾಧಿಕಾರವು ರದ್ದುಗೊಳಿಸಿರುವ ಆದೇಶವನ್ನು ಹಿಂತೆಗೆದುಕೊಳ್ಳಲು ಸರ್ಕಾರದ ಸೂಚನೆ ನೀಡುವರೇ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧) ೧೯೮೪ನೇ ಇಸವಿಯಲ್ಲಿ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಲಿ ಅಧ್ಯಕ್ಷರು ಮಾಡಿರುವ ೫೪೭ ಬಿಡಿ ನಿವೇಶನಗಳ ಮಂಜೂರಾತಿಯು ಕಾನೂನು ಬದ್ಧವಾಗಿಲ್ಲವೆಂದು ಪರಿಗಣಿಸಿ ಸರ್ಕಾರ ರದ್ದುಗೊಳಿಸಿದೆ.

೧೯೭೨ರ ಮೈಸೂರು ನಗರಾಭಿವೃದ್ಧಿ (ನಿವೇಶನ ಹಂಚಿಕೆ) ನಿಯಮಾವಳಿಗಳು.

೨) ಪರಿಶೀಲನೆಯಲ್ಲಿದೆ.

ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ.

೧೯೭. ಶ್ರೀಮತಿ ಮುಕ್ತಾರುನ್ನೀಸಾ ಬೇಗಂ (ನರಸಿಂಹರಾಜಪುರ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ ನೇಮಕವಾಗಿರುವ ಆಡಳಿತಾಧಿಕಾರಿಗಳನ್ನು ಸರ್ಕಾರವು ಎಲ್ಲಿಯವರೆಗೆ ಮುಂದುವರಿಸಲು ಉದ್ದೇಶಿಸಿದೆ ;

ಆ) ಈ ಸಂಸ್ಥೆಗಳಿಗೆ ಸರ್ಕಾರ ಯಾವಾಗ ಚುನಾವಣೆ ನಡೆಸುವುದು ;

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಆಡಳಿತಾಧಿಕಾರಿಗಳನ್ನು ದಿನಾಂಕ ೩೦-೬-೧೯೮೯ರ ವರೆಗೆ ನೇಮಕ ಮಾಡಲಾಗಿದೆ.

ಆ) ಜೂನ್ ೧೯೯೦ರ ಒಳಗಾಗಿ ಮಹಾನಗರ ಪಾಲಿಕೆಗಳಂ ಹಾಗೂ ಪುರಸಭೆ/ನಗರಸಭೆಗಳಿಗೆ ಚುನಾವಣೆ ನಡೆಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ದಸರಾ ವಸ್ತು ಪ್ರದರ್ಶನಕ್ಕೆ ಶಾಶ್ವತ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ.

೧೮೯. ಶ್ರೀಮತಿ ಮುಕ್ತರುನ್ನೀಸಾ ಬೇಗಂ (ನರಸಿಂಹರಾಜ).— ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ದೊಡ್ಡಕೆರೆ ಮೈದಾನದ ದಸರಾ ವಸ್ತು ಪ್ರದರ್ಶನಕ್ಕೆ ಶಾಶ್ವತ ಕಟ್ಟಡ ನಿರ್ಮಾಣ ಮಾಡಲು ರಾಜ್ಯ ಸರ್ಕಾರ ಯೋಚಿಸಿದೆಯೇ ;

ಆ) ಪ್ರಾಗಿದ್ದಲ್ಲಿ, ಅದರ ಅಂದಾಜು ಬೆಲೆ, ನಿರ್ಮಾಣ ಕಾರ್ಯ ಕೈಗೊಳ್ಳುವ ಸಮಯ ಹಾಗೂ ಅದರ ಮುಕ್ತಾಯ ಯಾವಾಗ ;

ಇ) ಇಲ್ಲವಾದರೆ ನಿರ್ಮಾಣ ಕಾರ್ಯ ಕೈಗೊಳ್ಳದಿರಲು ಕಾರಣವೇನು ;

ಶ್ರೀ ಎಸ್. ಆರ್. ಬೊಮ್ಮಾಯಿ (ವಾರ್ತಾ, ಪ್ರವಾಸೋದ್ಯಮ ಮಂತ್ರಿಗಳು).—

ಅ) ಹೌದು.

ಆ) ಉನ್ನತ ಯೋಜನೆಯು ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಕರ್ನಾಟಕ ಗೃಹ ನಿರ್ಮಾಣ ಮಂಡಳಿಗೆ ಬಂದ ಸಂಘದ ಅರ್ಜಿ ನಿವೇಶನಗಳ ಮಂಜೂರಿ ಬಗ್ಗೆ.

೨೬೭ ಶ್ರೀ ಗೋಪಾಲ್ ಎಂ. ಕಾನಡೆ, (ಸಿರ್ಸಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದ ಗೃಹ ಮಂಡಳಿಗೆ ೧೯೮೬ ರಿಂದ ಇದುವರೆಗೆ ಪಾಸಗಿ ಸಂಘಗಳಿಂದ ಮನೆ ನಿವೇಶನದ ಜಾಗದ ಮಂಜೂರಿಗೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಇದುವರೆಗೆ ಎಷ್ಟು ಸಂಸ್ಥೆಗಳಿಗೆ ಜಾಗವನ್ನು ಮಂಜೂರು ಮಾಡಿದ್ದೀರಿ?

ಇ) ಇದುವರೆಗೆ ಉಳಿದ ಅರ್ಜಿಗಳಿಗೆ ನಿವೇಶನ ಮಂಜೂರಾಗದೆ ಇರಲು ಕಾರಣವೇನು?

ಶ್ರೀ ಆರ್.ವಿ. ದೇಶಪಾಂಡೆ, (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೫೨

ಆ) ೨೩

ಇ) ೬ ಅರ್ಜಿಗಳು ತಿರಸ್ಕರಿಸಲ್ಪಟ್ಟಿದ್ದು ಇನ್ನುಳಿದ ೨೩ ಅರ್ಜಿಗಳನ್ನು ಕರ್ನಾಟಕ ಗೃಹ ಮಂಡಳಿಯ ವಿಭಾಗೀಯ ಕಛೇರಿಗಳಿಗೆ ವರದಿಯನ್ನು ಒಪ್ಪಿಸಲು ಕಳುಹಿಸಿಕೊಡಲಾಗಿದೆ.

ಬೆಂಗಳೂರು ಜಲಮಂಡಲಿಯಲ್ಲಿ ಕೆಲಸ ಮಾಡುತ್ತಿರುವ ಸೂಪರ್‌ನ್ಯೂಮರರಿ ನೌಕರರ ಬಗ್ಗೆ.

೨೯೧ ಶ್ರೀ ಗೋಪಾಲ್ ಎಂ. ಕಾನಡೆ, (ಸಿರ್ಸಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯಲ್ಲಿ ಕೆಲಸ ಮಾಡುತ್ತಿರುವ ಸೂಪರ್‌ನ್ಯೂಮರರಿ ನೌಕರರ ಸಂಖ್ಯೆ ಎಷ್ಟು?